ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

# ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ಕಾರ್ಯಾಲಯ

ಹೊಸ ಎಂ.ಸಿ.ಹೆಚ್. ಆಸ್ಪತ್ರೆ ಆವರಣ, ಹೊಸಪೇಟೆ ತಾ|| ವಿಜಯನಗರ ಜಿಲ್ಲೆ.
Email: dtovijayanagara@gmail.com

**ಸಂ:ಜಿಕ್ಷರೋನಿಅಕಾ/ಎನ್.ಟಿ.ಇ.ಪಿ/ 17 /2025-26** **ದಿನಾಂಕ: 10.09.2025**

## ನೇಮಕಾತಿ ಪ್ರಕಟಣೆ

ಪ್ರಧಾನ ಮಂತ್ರಿ ಜನ ಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ (PM-JANMAN) ದರ್ತಿ ಅಭಾ-ಜನ ಜಾತಿಯ ಗ್ರಾಮ ಉತ್ಕರ್ಷ ಅಭಿಯಾನ (DA-JGUA) ಯೋಜನೆಯ ವ್ಯಾಪ್ತಿಯ ಮತ್ತು ದುರ್ಗಮ ಹಾಗೂ ಸಂಪರ್ಕರಹಿತ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ನೀಡಲು ಸಂಚಾರಿ ಆರೋಗ್ಯ ಘಟಕಗಳನ್ನು (MHU) ಅನುಷ್ಠಾನಗೊಳಿಸಲು ಮಾನವ ಸಂಪನ್ಮೂಲ ಆಯ್ಕೆ ಮಾಡಲು ಈ ಕೆಳಗಿನ ಹುದ್ದೆಗಳಿಗೆ ಸೆಪ್ಟೆಂಬರ್-2025 ರಿಂದ ಮಾರ್ಚ್-2026 ರವರೆಗೆ 07 ತಿಂಗಳು ನೇರ ಗುತ್ತಿಗೆ ಆಧಾರದ ಮೇರೆಗೆ (ಹಾಗೂ ಸದರಿ ಗುತ್ತಿಗೆ ಅವಧಿಯು ಸರ್ಕಾರದ ಮಾರ್ಗಸೂಚಿ ಪರಿಶೀಲಿಸಿ ಅನುಮೋದನೆ ನೀಡಿದ ನಂತರ ಗುತ್ತಿಗೆ ಸೇವೆಯನ್ನು 2026-27 ನೇ ಸಾಲಿಗೆ ಮುಂದುವರೆಸಬಹುದಾಗಿದೆ) ಕಾರ್ಯನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ರೋಸ್ಟರ್/ಮೇರಿಟ್ ಆಧಾರದ ಮೇಲೆ ನೇಮಕಾತಿ ನಿಯಾಮಾಗಳನ್ವಯ ಅರ್ಜಿ ಆಹ್ವಾನಿಸಲಾಗಿದೆ.

| ಕ್ರ.ಸಂ | ಹುದ್ದೆ | ಒಟ್ಟು ಹುದ್ದೆಗಳು ಮತ್ತು ಮೀಸಲಾತಿ | ವಿದ್ಯಾರ್ಹತೆ | ಅನುಭವದ ವಿವರ ಮತ್ತು ವಯೋಮಿತಿ | ಮಾಸಿಕ ವೇತನ |
|---|---|---|---|---|---|
| 1 | ಶುಶ್ರೂಷಕರು | **04 ಹುದ್ದೆಗಳು**<br>ಪ.ಜಾ. ಪ್ರ.ಎ-01<br>ಸಾ.ಅ-01<br>ಸಾ.ಅ.(ಮ)-01<br>ಪ.ಪಂ-01 | • ಜಿ.ಎನ್.ಎಂ ನರ್ಸಿಂಗ್/ ಬಿ.ಎಸ್.ಸಿ ನರ್ಸಿಂಗ್<br>• ಕರ್ನಾಟಕ ನರ್ಸಿಂಗ್ ಕೌನ್ಸಿಲಿಂಗ್‌ನಲ್ಲಿ ನೋಂದಾಣಿಯಾಗಿರಬೇಕು | **ಅನುಭವ:**<br>ಕನಿಷ್ಠ ಎರಡು ವರ್ಷಗಳ ಸೇವೆ ಸಲ್ಲಿಸಿರುವ ಅನುಭವವನ್ನು ಹೊಂದಿರಬೇಕು.<br>**ವಯೋಮಿತಿ:**<br>ಗರಿಷ್ಟ 45 ವರ್ಷ | **ರೂ. 22,000/-** |
| 2 | ಪ್ರಯೋಗ ಶಾಲಾ ತಂತ್ರಜ್ಞರು | **04 ಹುದ್ದೆಗಳು**<br>ಪ.ಜಾ. ಪ್ರ.ಎ-01<br>ಸಾ.ಅ-01<br>ಸಾ.ಅ.(ಮ)-01<br>ಪ.ಪಂ-01 | • ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು ಮತ್ತು ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿಯು ನಡೆಸುವ ಪ್ರಯೋಗ ಶಾಲಾ ತಂತ್ರಜ್ಞತೆಯಲ್ಲಿ ಮೂರು ವರ್ಷದ ಡಿಪ್ಲೋಮಾ ಹೊಂದಿರಬೇಕು<br>**ಅಥವಾ**<br>ದ್ವಿತಿಯ ಪಿ.ಯು.ಸಿ ಯಲ್ಲಿ ವಿಜ್ಞಾನ ವಿಷಯದಲ್ಲಿ ಉತ್ತೀರ್ಣ ಮತ್ತು ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿಯು ನಡೆಸುವ ಪ್ರಯೋಗ ಶಾಲಾ ತಂತ್ರಜ್ಞತೆಯಲ್ಲಿ ಎರಡು ವರ್ಷದ ಡಿಪ್ಲೋಮಾ ಹೊಂದಿರಬೇಕು<br>• ಪ್ರಯೋಗ ಶಾಲಾ ತಂತ್ರಜ್ಞರು ಕಡ್ಡಾಯವಾಗಿ ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿಯ ನೋಂದಾಣಿ ಹೊಂದಿರಬೇಕು. | **ಅನುಭವ:**<br>ಕನಿಷ್ಠ ಎರಡು ವರ್ಷಗಳ ಸೇವೆ ಸಲ್ಲಿಸಿರುವ ಅನುಭವವನ್ನು ಹೊಂದಿರಬೇಕು.<br>**ವಯೋಮಿತಿ:**<br>ಗರಿಷ್ಟ 45 ವರ್ಷ | **ರೂ. 20,000/-** |

ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ನಮೂನೆಗಾಗಿ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳು, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕಾರ್ಯಾಲಯ, 60 ಹಾಸಿಗೆ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣ, ಹೊಸಪೇಟೆ, ವಿಜಯನಗರ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

**ವಿಶೇಷ ಸೂಚನೆ:** ಸದರಿ ನೇಮಕಾತಿ ಪ್ರಕ್ರಿಯೆಯು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಆದೇಶಕ್ಕೆ ಅನುಗುಣವಾಗಿ ಮುಂದಿನ ಮಾರ್ಪಾಡುಗಳಿಗೆ ಒಳಪಟ್ಟಿರುತ್ತದೆ.

**ನೇಮಕಾತಿ ವೇಳಾಪಟ್ಟಿ**

1. ಅರ್ಜಿ ವಿತರಿಸುವ ದಿ: 11.09.2025 ರಿಂದ ದಿ:18.09.2025
2. ಅರ್ಜಿ ಸಲ್ಲಿಸುವ ಕೊನೆಯ ದಿ: 18.09.2025 ಸಂಜೆ 5:30 ಗಂಟೆಯೊಳಗೆ
   ಅರ್ಜಿಗಳನ್ನು ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ಕಾರ್ಯಾಲಯ, ವಿಜಯನಗರ ಇಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಸೂಚಿಸಿದ ಕೊನೆಯ ದಿನಾಂಕದೊಳಗೆ ಸದರಿ ಕಛೇರಿಗೆ ನೇರವಾಗಿ ಅಥವಾ ಈ ಕಛೇರಿಯ ಇ-ಮೇಲ್ ವಿಳಾಸ: dtovijayanagara@gmail.com ಈ ಮೇಲ್ ಐಡಿಗೆ ಮಿಂಚಂಚೆ ಮೂಲಕವು ದಿ: 18.09.2025 ಸಂಜೆ 5:30 ಗಂಟೆಯೊಳಗೆ ರವಾನಿಸಬಹುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಸದಸ್ಯ ಕಾರ್ಯದರ್ಶಿಗಳು/ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳು
ವಿಜಯನಗರ ಜಿಲ್ಲೆ.